ಹೊರಟಿದ್ದಾರೆ ಸರ್ಕಾರ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತದೆ? ತಕ್ಷಣ ಆ ಸ್ವಾಮೀಜಿ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅಲ್ಲಿ ಆಗುತ್ತಿರುವ ಗಲಭೆಯನ್ನು ಸರ್ಕಾರ ಯಾವ ರೀತಿ ನಿಯಂತ್ರಣಕ್ಕೆ ತರುತ್ತದೆ? ದಯಮಾಡಿ ಈ ಸಭೆಯಲ್ಲಿ ತಿಳಿಸಬೇಕು. ಏಕೆಂದರೆ, ಮಠಗಳ ಬಗ್ಗೆ ಸಾಕಷ್ಟು ಆಸಕ್ತಿ ಇರತಕ್ಕಂಥ ಸರ್ಕಾರ ಇಂಥ ಮಠಗಳ ಏನು ಕ್ರಮ ತೆಗೆದುಕೊಳ್ಳುತ್ತದೆ, ಏನು ಹೇಳುತ್ತದೆ? ಎಂಬುದನ್ನು ತಿಳಿಸಬೇಕು. ತಕ್ಷಣ ಅಲ್ಲಿ ಆಗುತ್ತಿರುವ ಗಲಭೆಯನ್ನು ನಿಲ್ಲಿಸಬೇಕು ಮತ್ತು ಆ ಮಠದ ಆಸ್ತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾಧ್ಯಮಗಳಲ್ಲಿ ಪ್ರಸಾರವಾದ ಮಾಹಿತಿ ಆಧಾರ ಮೇಲೆ ಮಾನ್ಯ ಸದಸ್ಯರು ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದಾರೆ. ನಾವು ಆ ಬಗ್ಗೆ ಸಂಪೂರ್ಣ ಮಾಹಿತಿ ತರಿಸಿಕೊಳ್ಳುತ್ತೇವೆ. ನಂತರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಇ) **ವಿಷಯ:** ಮಂಗಳೂರಿನಲ್ಲಿ ಎರಡು ಪತ್ರಿಕಾ ಕಛೇರಿಗಳ ಮೇಲೆ ಸಮಾಜಘಾತುಕ ಶಕ್ತಿಗಳು ದಾಂಧಲೆ ಮಾಡಿರುವ ಬಗ್ಗೆ.

ಶ್ರೀ ಯು.ಟಿ. ಖಾದರ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ. 2 ದಿವಸಗಳಿಂದ ನಾವು ಇಲ್ಲಿ ಕಾನೂನು ಸುವ್ಯವಸ್ಥೆ ಬಗ್ಗೆ ಚರ್ಚೆ ಮಾಡಿದರೂ ಕೂಡ ನಿನ್ನೆ ರಾತ್ರಿ ಮಂಗಳೂರಿನಲ್ಲಿ ಎರಡು ಪತ್ರಿಕಾ ಕಛೇರಿಗಳ ಮೇಲೆ ಸಮಾಜಘಾತುಕ ಶಕ್ತಿಗಳು ದಾಳಿ ಮಾಡಿ ದಾಂಧಲೆ ನಡೆಸಿದ್ದಾರೆ. ನನ್ನ ಕಳಕಳಿಯ ವಿನಂತಿ ಏನೆಂದರೆ, ಪರಿಸ್ಥಿತಿಯ ಲಾಭವನ್ನು ಪಡೆದುಕೊಳ್ಳಲು ಕೆಲವು ಕಿಡಿಗೇಡಿಗಳು ಪ್ರಯತ್ನಿಸುತ್ತಿದ್ದಾರೆ. ಪೊಲೀಸ್ ಇಲಾಖೆ ಅವರು ಯಾರು ಎನ್ನುವುದನ್ನು ಪತ್ತೆ ಹಚ್ಚುವ ಕೆಲಸ ಮಾಡಬೇಕು. ಎರಡನೆಯದಾಗಿ, ಸರ್ಕಾರ ಬಹಳ ಆಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕು. ಅಲ್ಲಿ ಯಾರು ಕೋಮುವಾದಿ, ಪ್ರಚೋದನಕಾರಿ banner ಹಾಕುತ್ತಾರೆ ಅಂಥ ಸಂಘಟನೆ ವಿರುದ್ಧ ಕಠಿಣವಾದ ಕ್ರಮ ಸರ್ಕಾರ

ತೆಗೆದುಕೊಳ್ಳಬೇಕು. ಹಾಗೆಯೇ, ಇನ್ನು 15 ದಿವಸಗಳ ಕಾಲ ರಾಜ್ಯದ ಯಾವುದೇ ಪ್ರದೇಶದಲ್ಲಿ ಸಹ ಮುಸ್ಲಿಂ, ಹಿಂದೂ, ಕ್ರಿಶ್ಚಿಯನ್ ಇರಲಿ, ಹೀಗೆ ಯಾವುದೇ ಸಮಾಜೋತ್ಸವದ ಬಹಿರಂಗ ಸಮಾವೇಶಕ್ಕೆ ಅವಕಾಶ ಕೊಡಬಾರದು. ಕೊಟ್ಟರೆ, ಹೆಚ್ಚು ಕಡಿಮೆಯಾದರೆ ಆ ಜವಾಬ್ದಾರಿಯನ್ನು ಅವರೇ ವಹಿಸಿಕೊಳ್ಳಬೇಕೆಂದು ಗಮನ ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಇದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಶೂನ್ಯವೇಳೆಯಲ್ಲಿ ಒಂದೇ ವಿಷಯಕ್ಕೆ ಎಲ್ಲರೂ ಮಾತನಾಡುವುದಕ್ಕಾಗುವುದಿಲ್ಲ. ನೀವು ನೋಟೀಸ್ ಕೊಡಿ. ರೇವಣ್ಣನವರೆ, ತಾವು ಹಿರಿಯ ಸದಸ್ಯರಿದ್ದೀರಿ. ನೋಟೀಸ್ ನೀಡದೆ ಏನು ಬೇಕಾದರೂ ಪ್ರಸ್ತಾಪ ಮಾಡಬಹುದೇ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮುಸಲ್ಮಾನರನ್ನು ದುರುದ್ದೇಶದಿಂದ ಅರೆಸ್ಟ್ ಮಾಡುತ್ತಿದ್ದಾರೆ. ಇದಕ್ಕೆ ಅವಕಾಶ ಆಗಬಾರದೆಂದು ನಾನು ಕಾನೂನು ಸಚಿವರಲ್ಲಿ ಮನವಿ ಮಾಡುತ್ತೇನೆ.

ಅಧ್ಯಕ್ಷರು : ಈ ರೀತಿ ಮಧ್ಯೆ ಎದ್ದು ಮಾತನಾಡುವುದು ಸರಿಯಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಏಕೆಂದರೆ ನನಗೆ ನೇರವಾಗಿ ಮುಖ್ಯಮಂತ್ರಿಯವರ ಕ್ಷೇತ್ರವಾದ ಶಿವಮೊಗ್ಗದಿಂದ phone ಬಂದಿದ್ದು ಅಲ್ಲಿ ಮುಸಲ್ಮಾನರನ್ನು ಏನಿಲ್ಲದೆಯೇ ಅರೆಸ್ಟ್ ಮಾಡುತ್ತಿದ್ದಾರೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಕೆ.ಜಿ. ಕುಮಾರಸ್ವಾಮಿ : ರೇವಣ್ಣನವರು ಹೇಳಿದ ಹಾಗೆ ಶಿವಮೊಗ್ಗದಲ್ಲಿ ದಂಗೆ ನಡೆಯುತ್ತಿದೆ. ದಂಗೆ ಮಾಡಿದವರನ್ನು ಅರೆಸ್ಟ್ ಮಾಡದೆ ಸುಮ್ಮನೆ ಬಿಡುವುದಕ್ಕೆ ಆಗುತ್ತದೆಯೇ? ದಯಮಾಡಿ ತಾವು ಯೋಚಿಸಬೇಕು. ರೇವಣ್ಣನವರು ಸಭೆಗೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರಲ್ಲಿ ನನ್ನ ಮನವಿ ಏನೆಂದರೆ, ನಮ್ಮ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ರೇವಣ್ಣನವರು ಮಾತನಾಡಲು ಎದ್ದು ನಿಂತಾಗ ಅವಕಾಶ ಕೊಡದೆ ಕುಳಿತುಕೊಳ್ಳಿ ಎಂದು ಹೇಳಬೇಡಿ.

(ಗೊಂದಲ)

ಅಧ್ಯಕ್ಷರು : ಅವರು ನಾಯಕರು ಇರಬಹುದು. ಆದರೆ, ಎಲ್ಲರಿಗೂ ನಿಯಮಾವಳಿ ಒಂದೇ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಶಾಸಕಾಂಗ ಪಕ್ಷದ ನಾಯಕರು ಎದ್ದು ನಿಂತು ವಿಚಾರ ಮಂಡಿಸಬಹುದು. ಅದಕ್ಕೆ ತಾವು ಅವಕಾಶ ಕೊಡಬೇಕು.

(ಗೊಂದಲ)

ಅಧ್ಯಕ್ಷರು : ಶಿವಲಿಂಗೇಗೌಡರೆ, ನಿಮ್ಮ ಹೆಸರು ಹೇಳಬೇಕಾಗುತ್ತದೆ. ಪ್ರತಿಯೊಂದಕ್ಕೂ ಎದ್ದು ನಿಂತು ಮಾತನಾಡುತ್ತೀರಿ. No. ಕುಳಿತುಕೊಳ್ಳಿ. Please, ಕುಳಿತುಕೊಳ್ಳಿ. ಪ್ರತಿ ಸಲ ನೋಡುತ್ತಿದ್ದೇನೆ. ನಿಮ್ಮ ಈ ವರ್ತನೆ ಸರಿಯಿಲ್ಲ. I will name you. I want to name that Member... I will name you. ಪ್ರತೀ ಸಲ ನೋಡುತ್ತಿದ್ದೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಶಿವಲಿಂಗೇಗೌಡರು ಹೇಳಿರುವುದರಲ್ಲಿ ತಪ್ಪೇನಿಲ್ಲವೆನ್ನುವುದು ನನ್ನ ಭಾವನೆಯಾಗಿದೆ. ನಾನು ಒಂದು ಮಾತು ಹೇಳುತ್ತೇನೆ. ಪ್ರತೀ ಸಲ ಸಿದ್ದರಾಮಯ್ಯನವರು ಮತ್ತು ಜಯಚಂದ್ರರವರು ಮಾತನಾಡುವ ಸಂದರ್ಭದಲ್ಲಿ ನೀವು notice ಕೊಡಿ ಎಂದು ನೀವು ಹೇಳುವುದಕ್ಕಾಗುತ್ತದೆಯೇ? ಅದೇ ರೀತಿ ರೇವಣ್ಣನವರು ನಮ್ಮ ಪಕ್ಷದ ನಾಯಕರು. ಅವರು ಮಾತನಾಡಲು ಎದ್ದು ನಿಂತಾಗ notice ಕೊಟ್ಟು ಮಾತನಾಡಿ ಎಂದು ಹೇಳಿದರೆ ಅರ್ಥವೇನು? ಮಾನ್ಯ ಸದಸ್ಯರು ವಿಚಾರ ಚರ್ಚೆ ಮಾಡಿದಾಗ ಅದಕ್ಕೆ ಸಂಬಂಧಪಟ್ಟಂತೆ ಒಂದು clarification ಕೇಳುವುದಕ್ಕೆ ನಮ್ಮ ನಾಯಕರು ಅರ್ಹರಿದ್ದಾರೆ. ಅದಕ್ಕೆ ನೀವು notice

ಕೊಟ್ಟು ಮಾತನಾಡಿ ಎಂದು ಹೇಳುವುದಾದರೆ, ಹಾಗಾದರೆ ಎಲ್ಲರಿಗೂ notice ಕೊಟ್ಟು ಮಾತನಾಡಿ ಎಂದು ಹೇಳಬೇಕಾಗುತ್ತದೆ. ಈ ಸಭೆಯಲ್ಲಿ ಯಾರು ಮಾತನಾಡಿದರೂ ನೋಟೀಸ್ ಕೊಡುವುದಕ್ಕೆ ನೀವು ಹೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಶೂನ್ಯವೇಳೆಯಲ್ಲಿ ಎಲ್ಲರೂ ಎದ್ದು ಈ ರೀತಿ ಪ್ರಸ್ತಾಪ ಮಾಡುತ್ತಿದ್ದರೆ ಸದನವನ್ನು ಹೇಗೆ ನಡೆಸುವುದು?

ಶ್ರೀ ಹೆಚ್.ಡಿ. ರೇವಣ್ಣ : ನನಗೆ ನಿಯಮಾವಳಿ ಹೇಳುವುದಕ್ಕೆ ಹೋಗಬೇಡಿ ನಿಮ್ಮ ಮುಖ್ಯಮಂತ್ರಿಗಳಿಗೆ ನಿಯಮಾವಳಿ ಹೇಳಿ, ನಿಯಮಾವಳಿಯನ್ನು ನನಗೇಕೆ ಹೇಳುತ್ತೀರಿ?

(ಗೊಂದಲ)

ಶ್ರೀ ಎ. ಮಂಜು : ನೀವು ಅವರನ್ನು ಕೇಳಿಕೊಳ್ಳಿ, ಅವರಿಗೆ ಕೊಟ್ಟಿರಿ ನಮಗ್ಯಾಕೆ ಕೊಡಲಿಲ್ಲವೆಂದು ಕೇಳಿ. ನಮ್ಮ ನಾಯಕರ ಬಗ್ಗೆ ನೀವು ಏಕೆ ಹೇಳುತ್ತೀರಿ? He cannot question that, ask your leaders, you cannot question our leaders. NO No, ಮಾನ್ಯ ಅಧ್ಯಕ್ಷರೆ, ಸದನ ನಡೆಸುವವರು ನೀವು, ನೀವು ಹೇಳಬೇಕು. ಅವರಿಗೆ ಟೈಂ ಕೊಡುತ್ತೀರಾ ಎಂದು ಕೇಳಿದರೆ ಏನರ್ಥ? ನಿಮ್ಮ ನಾಯಕರಿಗೆ ನೀವು ಹೇಳಿಕೊಳ್ಳಿ, ನಮ್ಮ ನಾಯಕರ ಬಗ್ಗೆ ನೀವು ಮಾತನಾಡಬೇಡಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ನಿಮ್ಮ ನಾಯಕರ ಬಗ್ಗೆ ಹೇಳಲಿಲ್ಲ, ನಿಮ್ಮ ನಾಯಕರಿಗೆ ಅವಕಾಶ ಕೊಟ್ಟ ಹಾಗೆ ನಮ್ಮ ನಾಯಕರಿಗೂ ಅವಕಾಶ ಕೊಡಿ ಎಂದು ಕೇಳಿದೆ ಅಷ್ಟೆ.

(ಗೊಂದಲ)

ಶ್ರೀ ವೈ.ಎನ್. ರುದ್ರೇಶಗೌಡ : ಅದನ್ನು ನೀವು ಈ ಸಂದರ್ಭದಲ್ಲಿ ಏಕೆ ಹೇಳುತ್ತೀರಿ? ನೀವು ಈ ಸಂದರ್ಭದಲ್ಲಿ ಅದನ್ನು ಉದಾಹರಣೆ ಕೊಡುವುದಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಅವರಿಗೂ ಕೊಟ್ಟ ಹಾಗೆ ನಮಗೂ ಕೊಡಿ ಎಂದು ಕೇಳಿದ್ದೇವೆ, ಅವರಿಗೆ ಕೊಡಬೇಡಿ ಎಂದು ನಾನು ಹೇಳಿಲ್ಲ.

(ಗೊಂದಲ)

ಶ್ರೀ ವೈ.ಎನ್. ರುದ್ರೇಶಗೌಡ : ಅವರು ವಿರೋಧ ಪಕ್ಷದ ನಾಯಕರು.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಅವರು ನಮಗೂ ಲಿಡರ್. ಇದು ಒಳ್ಳೆ ಕಥೆಯಾಯಿತಲ್ಲ.

(ಗೊಂದಲ)

ಶ್ರೀ ವೈ.ಎನ್. ರುದ್ರೇಶಗೌಡ : ನಮ್ಮ ಲೀಡರ್ ಬಗ್ಗೆ ಉದಾಹರಣೆ ಹೇಳುವುದು ಸರಿಯಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಸಿದ್ದರಾಮಯ್ಯನವರು ಅಧಿಕೃತ ವಿರೋಧ ಪಕ್ಷದ ನಾಯಕರು. ತಾವು ಎಲ್ಲರೂ ಸೇರಿಕೊಂಡು ಅಧಿಕೃತ ವಿರೋಧ ಪಕ್ಷ ಎಂದು ಇದೆ. ಹಾಗೆಯೇ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಇದು ಸಹಜ. ಇದು ಹಿಂದಿನಿಂದಲೂ ಬೆಳೆದು ಬಂದಿರುವ ಸಂಪ್ರದಾಯ. ಅವರಿಗೆ in fact ರಾಜ್ಯಪಾಲರ ಭಾಷಣ ಇರಬಹುದು, ಬಜೆಟ್ ಭಾಷಣ ಇರಬಹುದು ಅವರಿಗೆ ಟೈಂ ಕೂಡ ಫಿಕ್ಸ್ ಮಾಡುವ ಹಾಗೆ ಇಲ್ಲ. ಅವರು ಎದ್ದಾಗ ಯಾರೇ ಮಾತನಾಡುತ್ತಿರಲಿ ಅವರಿಗೆ ಅವಕಾಶ ಮಾಡಿಕೊಡಬೇಕು. ಇದು ಪದ್ಧತಿ, ನೀವು ಕೂಡ ಅಧಿಕೃತ ವಿರೋಧ ಪಕ್ಷವಾದಾಗ ಬಾಲಕೃಷ್ಣರವರಿಗೂ ಅವಕಾಶ ಕೊಡುತ್ತೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಸಿದ್ದರಾಮಯ್ಯನವರು ಅಧಿಕೃತ ವಿರೋಧ ಪಕ್ಷದ ನಾಯಕರು ಜಯಚಂದ್ರರವರು ಮಾತನಾಡುವುದಿಲ್ಲವೆ?

(ಗೊಂದಲ)

ಅಧ್ಯಕ್ಷರು : ಇದರ ಬಗ್ಗೆ ಚರ್ಚೆ ಏನೂ ಬೇಡ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಒಂದು ನಿಮಿಷ ಸಾರ್. ಜಯಚಂದ್ರರವರು ಮಧ್ಯದಲ್ಲಿ ಮಾತನಾಡುವುದಿಲ್ಲವೆ? ಅವರು ಮಾತನಾಡುವುದಕ್ಕೆ ಅಲ್ಲ, ನಮ್ಮ ನಾಯಕರು ಅವರು, ನಮ್ಮ ಪಕ್ಷದ ವತಿಯಿಂದ ಸಭಾನಾಯಕರನ್ನು ಮಾಡಿಕೊಂಡಿದ್ದೇವೆ, ನೀವು ನಮಗೆ ಅವಕಾಶ ಮಾಡಿ ಕೊಡಿ ಎಂದು ಕೇಳುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು : Recognized opposition ಎನ್ನುವ ಪದದ ಅರ್ಥವನ್ನು ಮೊದಲು ಅರ್ಥ ಮಾಡಿಕೊಳ್ಳಿ. ಕುಳಿತುಕೊಳ್ಳಿ. ನೀವು ಏನು ಪ್ರತಿ ಸಲ ಎದ್ದು ನಿಲ್ಲುತ್ತೀರಿ?

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ನಮಗೂ ಅವಕಾಶ ಮಾಡಿ ಕೊಡಿ ಎಂದು ಕೇಳುತ್ತಿದ್ದೇವೆ. ಫ್ರಂಟ್‌ಲೈನ್‌ನಲ್ಲಿ ಎಲ್ಲರಿಗೂ ಅವಕಾಶ ಮಾಡಿ ಕೊಟ್ಟಿದ್ದೀರಾ, ನಮಗೂ ಏಕೆ ಅವಕಾಶ ಮಾಡಿ ಕೊಡಲ್ಲ ಎಂದು ಕೇಳುತ್ತಿದ್ದೇವೆ. ಎಲ್ಲರಿಗೂ ನೋಟೀಸ್ ಕೊಡಿ ಎಂದು ಕೇಳುತ್ತೀರಾ?

ಶ್ರೀ ಎಂ.ಟಿ. ಕೃಷ್ಣಪ್ಪ : ನಮ್ಮನ್ನೆಲ್ಲಾ ಸಸ್ಪೆಂಡ್ ಮಾಡಿ ಆಚೆಗೆ ಹೋಗುತ್ತೇವೆ. ಪಾಪ ಏಕೋ ನಮ್ಮ ಪಕ್ಷ ಕಂಡರೆ ನಿಮಗೆ ಅಲರ್ಜಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಹಿಂದೆಯೂ ಕೂಡ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು, ಮಾಧುಸ್ವಾಮಿಯವರು ಎಲ್ಲರೂ ಮಾತನಾಡುತ್ತಿದ್ದರು. ಕಾನೂನು ಸಚಿವರೇ, ಹಾಗಾದರೆ, ಸಭಾನಾಯಕರು ವಿರೋಧ ಪಕ್ಷದ ನಾಯಕರು ಇಬ್ಬರೇ ಮಾತನಾಡಬೇಕೆ? ಬೇರೆ ಯಾರೂ ಕೂಡ ಮಾತನಾಡುವ ಹಾಗೆ ಇಲ್ಲವೆ?

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್ : ಮಾತನಾಡಬಹುದು, ಪರ್ಮಿಷನ್ ತೆಗೆದುಕೊಂಡು ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಹಾಗಾದರೆ ನಿಮ್ಮ ಪ್ರಕಾರ ಅವರಿಬ್ಬರನ್ನೂ ಬಿಟ್ಟು ಬೇರೆಯವರು ಮಾತನಾಡುವ ಹಾಗೆ ಇಲ್ಲವೆಂದು ಸಭೆಯಲ್ಲಿ ಹೇಳಿಬಿಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಕಾನೂನು ಸಚಿವರಿಗೆ ಸ್ವಲ್ಪ ಜವಾಬ್ದಾರಿಯಿಂದ ಹೇಳಿಕೆ ಕೊಡಲಿಕ್ಕೆ ಹೇಳಿ.

(ಗೊಂದಲ)

ಅಧ್ಯಕ್ಷರು : ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ. ಮಾನ್ಯ ಸದಸ್ಯರಾದ ನರಸಿಂಹನಾಯಕ್‌ರವರು ಮಾತನಾಡಿ.

8. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ:

ಶ್ರೀ ನರಸಿಂಹನಾಯಕ್ (ಸುರಪುರ) : ಮಾನ್ಯ ಅಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸಲಿಕ್ಕೆ ತಾವು ನನಗೆ ಕಾಲಾವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಪ್ರಾರಂಭಿಸುತ್ತೇನೆ. ನಮ್ಮ ಸರ್ಕಾರ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ. ಅದರಲ್ಲಿ ಮುಖ್ಯವಾಗಿ ನಮ್ಮ ಸರ್ಕಾರ ಯಾದಗಿರಿಯನ್ನು ಜಿಲ್ಲೆಯಾಗಿ ರಚನೆ ಮಾಡಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಹೃದಯಪೂರ್ವಕವಾಗಿ ಅಭಿನಂದಿಸಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಏಕೆಂದರೆ, ಇದು ಸುಮಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು. ಗುಲ್ಬರ್ಗಾ ಜಿಲ್ಲೆ ವಿಭಜಿಸಿ ಸುರಪುರ, ಶಹಾಪುರ, ಯಾದಗಿರಿ ಈ ಮೂರು ತಾಲ್ಲೂಕುಗಳನ್ನು ಸೇರಿಸಿ ಒಂದು ಜಿಲ್ಲೆ ಮಾಡಿ ಅಭಿವೃದ್ಧಿಯಾಗಲಿಕ್ಕೆ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ನಾನು ಈ ಸಭೆಯ ಮೂಲಕ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದರ ಜೊತೆಗೆ ಈ ವರ್ಷ ನಾವು ಯಾವತ್ತು ಕಂಡರಿಯದ ಪ್ರವಾಹವನ್ನು ಕಂಡಿದ್ದೇವೆ. ಈ ಬಗ್ಗೆ ಹಿರಿಯರು